ಅವರಿಗೆ ಕೊಡಿ. ಯಂಗ್‌ಸ್ಟರ್‌ಗಳು ಬೆಳೀಬೇಕು' ಎಂದು ಭಾವುಕನಾದ ಇವನು.

'ನೊ ಐ ವಾಂಟ್ ಎಕ್ಸ್‌ಪೀರಿಯನ್ಸ್ ಪರ್ಸನ್' ಬಾಸ್ ದರ್ಪ ತೋರಿದ. 'ಹಾಗಂದ್ರೆ ಹೇಗೆ? ನಿಮ್ಮಿಂದ ನಾನು ಕಲೀಲಿಲ್ವೆ' ವಿನಯ ತೋರಿದ ಬೇಕೆಂದೇ ಇವನು. 'ಹುಂ ಈಗ ನನ್ನನ್ನೇ ಮೀರಿಸ್ತೀರಾ ಬಿಡಿ. ಪ್ರಮೋಷನ್ ಬೇಡ ಅಂದವರು ನೀವೇ ನೋಡಿ'. ಇರಿಯುವ ನಗೆ ಬೀರಿದ ಬಾಸ್.

'ಸಾರಿ ಬಾಸ್ ದೇಶ ವಿದೇಶಗಳನ್ನೆಲ್ಲಾ ತುಂಬಾ ಸುತ್ತಿ ಬಿಟ್ಟೆ. ನನಗೂ ರೆಸ್ಟ್ ಬೇಕು. ಇತ್ತೀಚೆಗೆ ನನ್ನ ಹೆಲ್ತ್ ಕಂಡೀಷನ್ ಅಷ್ಟಕಷ್ಟೆ ಸದ್ಯಕ್ಕೆ ನಾನಿರುವ ಪೋಸ್ಟ್‌ನಲ್ಲೇ ಐ ಆ್ಯಮ್ ಹ್ಯಾಪಿ' ಅಂದವನೆ ಥಟ್ಟನೆ ಈಚೆ ಬಂದ. ಪಾರ್ಟನರ್‌ಶಿಪ್ ಮಾತಿರಲಿ, ಕನಿಷ್ಠ ಪರ್ಸಂಟೇಜ್ ಬಗ್ಗೆಯೂ ಉಸಿರೆತ್ತುತ್ತಿಲ್ಲವೆ ಗ್ರೀಡಿ ಮ್ಯಾನ್. ಇಂಥ ಸ್ಕೌಂಡ್ರಲ್‌ಗಳಿಗಾಗಿ ದುಡಿಯೋದು ವೇಸ್ಟ್ ಅಂದುಕೊಂಡು ಹತಾಶನಾದ. ನಂತರದ ದಿನಗಳಲ್ಲಿ ಗಿರೀಶ್‌ನಲ್ಲಾದ ಬದಲಾವಣೆಗಳನ್ನು ಇಡೀ ಕಂಪನಿಯೇ ಗಮನಿಸಿ ನಿಡುಸುಯ್ದಿತ್ತು. ಅಹಂಕಾರ ಇರಬೇಕು, ಆದರೆ ಇಷ್ಟಿರಬಾರದೆಂದುಕೊಂಡವರೇ ಬಹಳ. ಅನೇಕ ವಿದೇಶಿ ವ್ಯವಹಾರಗಳು ಅವನಿಗೆ ಮಾತ್ರ ಕರಗತವಾಗಿತ್ತು. ಶಾರ್ಪ್ ಶಾಲಿನಿಯೂ ಅವನೊಂದಿಗೆ ಅನೇಕ ಸಲ ದೇಶ ವಿದೇಶಗಳಿಗೆ ಬಿಸಿನೆಸ್ ಟೂರ್ ಹೋಗುತ್ತಿದ್ದುದುಂಟು. ಆದರೂ ಅವನು ತನ್ನ ಕೌಶಲ್ಯ, ಕಾರ್ಯವೈಖರಿ, ಸಾಮರ್ಥ್ಯದ ಗುಟ್ಟು ಪಟ್ಟುಗಳನ್ನು ಬಿಟ್ಟುಕೊಡದಂತಹ ಚಿಗುಟಿ ವ್ಯಕ್ತಿ. ತಿಳಿದುಕೊಳ್ಳಬೇಕೆಂಬ ಹಸಿವು ಅವಳಿಗೆಷ್ಟಿದೆ ಎಂದವನು ಅಂದಾಜು ಮಾಡಬಲ್ಲ. ಅವಳಾಗಿ ತೆಕ್ಕೆ ಬಿದ್ದರೆ ಸುಖಿಸುತ್ತಿದ್ದನಾದರೂ ಮೈಮರೆತವನಲ್ಲ. ಹೆಣ್ಣಿನ ಸಂಗದಲ್ಲಾಗಲೀ, ಹಣದ ಕಂತೆಯ ಎದುರಾಗಲಿ ಡ್ರಿಂಕ್ಸ್ ಹೀರುವ ರಸಮಯ ಸೀನ್‌ಗಳಲ್ಲಾಗಲೀ ಸಿಂಕ್ ಆದವನಲ್ಲ. ಪರಮ್‌ಶೆಟ್ಟಿ ಮತ್ತು ಶಾಲಿನಿಯಿಂದ ಹೆಚ್ಚೇ ಕೆಲಸ ತಗೋತಿದ್ದರೂ ಅದರ ಫೈನಲೈಸ್ ಅವನೇ ಮಾಡುತ್ತಿದ್ದು ಬಾಸ್ ಎದುರು ಬೀಗುವಂತಹ ಯಾವ ಸಂದರ್ಭವನ್ನೂ ಅವನು ಅನ್ಯರಿಗೆ ಬಿಟ್ಟು ಕೊಡುವವನಲ್ಲ. ಹೀಗಾಗಿ ಅವರೂ ಅಷ್ಟೆ, ಎದುರಿನಲ್ಲಿ ಅವನನ್ನು ಓಲೈಸಿದರೂ ಅಂತರಂಗದಲ್ಲಿ ಇವಾ ಯಾರನ್ನೂ ಬೆಳೆಯಲು ಬಿಡದಂತಹ ಮೋಸ್ಟ್ ಸೆಲ್ಫಿಷ್ ಎಂದಾಡಿಕೊಳ್ಳುತ್ತಿದ್ದುದೇ ಹೆಚ್ಚು.

ಅದು ಬಾಸ್‌ಗೂ ಗೊತ್ತು. ಯಾರಾದರೇನು ಅವನಿಗೆ ತನ್ನ ಕಂಪನಿ ಬೆಳೆಯಬೇಕಷ್ಟೆ. ಆದರೂ ಅತಿ ಅನ್ನಿಸಿದಾಗ ಬಾಸ್‌ಗೂ ಅವನನ್ನು ಸಹಿಸಿಕೊಳ್ಳಲಾಗುತ್ತಿರಲಿಲ್ಲ. ಮೀಟಿಂಗ್, ಡಿಸ್ಕಷನ್, ಪ್ರಾಜೆಕ್ಟ್‌ವರ್ಕ್, ಕ್ವಾಲಿಟಿ, ಟೆಸ್ಟ್‌ಗಳು ಎಲ್ಲದರಿಂದ ಇತ್ತೀಚೆಗೆ ದೂರ ಸರಿದ ಗಿರೀಶ್ ನುಂಗಲಾರದ ಬಿಸಿತುಪ್ಪದಂತಾಗಿ ಬಿಟ್ಟಿದ್ದ. ಬಡ್ತಿಯ ಮುಲಾಜು, ಸ್ಯಾಲರಿಯ ಆಂಕ್ಸೈಟಿಯೂ ಇಲ್ಲದವರನ್ನು ಬಗ್ಗಿಸುವುದು ಹೇಗೆಂಬ ಎದೆಗುದಿ. ತನ್ನ ಚೇಂಬರ್‌ಗೆ ಬಾಸೇ ಬರುವಂತಹ ಸೀನ್ ಕ್ರಿಯೇಟಿವ್ ಮಾಡುವ ಅವನ ಚಾಣಾಕ್ಷತೆಗೆ, ವರ್ಕರ್‌ಗೆ ನೋಟೀಸ್ ನೀಡುವುದು ಸ್ಪಾಟ್, ವಿಸಿಟ್ ಮಾಡಿ ತಪ್ಪು ಕಂಡುಹಿಡಿದು ಗದರುವುದು, ತಾನು ಬಾಸ್‌ಗಿಂತ ದೊಡ್ಡವನೆಂಬ ಪರಿಣಾಮವನ್ನು ಬೀರಲು ತವಕಿಸುವ ಪರಿಯನ್ನು ಗಮನಿಸಿದ್ದಳು ಶಾಲಿನಿ. ಮುಂದಿನ ತಿಂಗಳು ಸ್ವಿರ್ಜರ್‌ಲೆಂಡ್‌ಗೆ ಅವನೊಂದಿಗೆ ತನ್ನನ್ನು ಬಾಸ್ ಕಂಪನಿ ಕಾರ್ಯನಿಮಿತ್ತ ಕಳುಹಿಸಬೇಕೆಂದಿರುವಾಗಲೇ ಅವನು ಬೇಕೆಂದೇ ಒಂದು ತಿಂಗಳು ಸಿಕ್ ಲೀವ್ ಹಾಕಿದಾಗ ಅಡ್ಮಿನಿಸ್ಟ್ರೇಷನ್ ವಿಂಗ್ ಪೂರಾ ಕಂಗಾಲು. ಬಾಸ್ ಎಷ್ಟೇ ಕಾಡಿ ಬೇಡಿದರೂ 'ಎಕ್ಸ್‌ಟ್ರೀಮ್ಲಿ ಸಾರಿ ಬಾಸ್' ಅಂದವನೇ ಬ್ರೀಫ್‌ಕೇಸ್ ಹಿಡಿದು ಅವನು ಹೊರಟೇ ಹೋದಾಗ ಬಾಸ್‌ಗೆ ಅವನು ಹದಿನೈದು ವರ್ಷಗಳ ಹಿಂದೆ ಹದಿನೈದು ಸಾವಿರ ಸಂಬಳಕ್ಕೆ ತನ್ನೆದುರು ಕೈ ಕಟ್ಟಿ ನಿರ್ಗತಿಕನಂತೆ ನಿಂತಿದ್ದು ತಕ್ಷಣ ಕಣ್ಮುಂದೆ ಪಾಸ್ ಆಯಿತು. ಅವನು ವೇಗವಾಗಿ ಬೆಳೆದ ವಿಸ್ಮಯ ಮೂಡಿಸಿದಂತೆಯೇ ವಿಷಾದವನ್ನೂ ತನ್ನಲ್ಲಿ ಸ್ಫುರಿಸುವಾಗ ವಿಲಿಯಂ ನಾಲಿಗೆ ಕಹಿ ಕಹಿ. ಅವನು ಸಾಧಕನೋ ವಂಚಕನೋ ಎಂಬ ಜಿಜ್ಞಾಸೆ ಶಾಲಿನಿಯ ಮನಸ್ಸನ್ನು ಕೊರೆಯದಿರಲಿಲ್ಲ.

ತಿಂಗಳುಗಟ್ಟಲೆ ರಜಾ ಹಾಕಿ ಬಂದ ಗಂಡನನ್ನು ಕಂಡು ಸಂಭ್ರಮಿಸಿದ ಭಾಗ್ಯ ಅವನೊಂದಿಗೆ ತಿರುಪತಿ, ಧರ್ಮಸ್ಥಳ, ಮಂತ್ರಾಲಯ ಅಂತೆಲ್ಲಾ ಟೂರ್ ಪ್ರೋಗ್ರಾಮ್ ಹಾಕಿಕೊಂಡಳು. ಅಲ್ಲಿಗೆಲ್ಲಾ ಹೋಗಲು ನಮ್ಮ ಮಕ್ಕಳಿಗೆ ಮಕ್ಕಳಾದ ಮೇಲೆ ಪಿಲಿಗ್ರಿಮ್ಸ್ ವಿಸಿಟ್ ಅಂದ ಗಿರೀಶ, ಊಟಿ, ಗೋವಾ, ಬಾಂಬೆ ಎಂದೆಲ್ಲಾ ಹೆಂಡತಿ ಮಕ್ಕಳೊಡನೆ ಸುತ್ತಾಡಿ ಬರುತ್ತಾನೆ. ತಿಂಗಳಾದರೂ ನೌಕರಿಗೆ ಹೋಗದೆ ಲೀವ್ ಎಕ್ಸ್‌ಟೆಂಡ್ ಮಾಡುವ ಅವನನ್ನು ಕಂಡಾಗ ಭಾಗ್ಯಳಿಗೀಗ ಗಾಬರಿ. ಅವನದೆಷ್ಟು ಫಿಕಲ್ ಮೈಂಡ್ ಎಂಬುವುದನ್ನು ಬಲ್ಲವಳು ಆಕೆ. ಕಂಪನಿಗಳಲ್ಲಿ ಇಷ್ಟೆಲ್ಲಾ ಲೀವ್ ಕೊಡುವುದಿಲ್ಲವಲ್ಲವೆಂದು ಸಂಶಯ ಪಟ್ಟಳು. 'ಕೊಡದಿದ್ದರೆ ಕತ್ತೆ ಬಾಲ, ಬೇರೆ ಯಾರನ್ನಾದರೂ ಅಪಾಯಿಂಟ್‌ಮೆಂಟ್ ಮಾಡಿಕೊಳ್ಳಲಿ ಬಿಡೆ, ನನಗೂ ದುಡಿದು ದುಡಿದು ಸಾಕಾಗಿದೆ' ಅಂದು ಬಿಟ್ಟ. ಈ ಮಾತಿನಿಂದ ಆಕೆಗೇನೂ ಸಂತೋಷವಾಗಲಿಲ್ಲ.

'ಸ್ವಿಟ್ಜರ್‌ಲ್ಯಾಂಡ್ ಅಂತೆ, ಬಾಸ್ಟನ್ ಅಂತೆ ಇವನಜ್ಜಿ ಪಿಂಡ. ಕತ್ತೆ ಚಾಕರಿಗೆ ನಾನು ಬೇಕಷ್ಟೆ ಕಣೆ. ಇವನು ವಿದೇಶಕ್ಕೆ ಹೋಗಿ ಮಾರ್ಕೆಟಿಂಗ್ ಕುದುರಿಸಲಿ, ಆಗ ತಿಳಿಯುತ್ತೆ. ಯಾರ ಯೋಗ್ಯತೆ ಏನಂತ' ಎಂದು ಬೈದುಕೊಳ್ಳುತ್ತಾ ಕೈಗೆ ಸಿಕ್ಕಿದ್ದನ್ನು ಇವನು ಎತ್ತಿ ಬಿಸಾಡಿದ. ಮಕ್ಕಳು ಗಾಬರಿಯಾಗಿ ಅಮ್ಮನ ಹಿಂದೆ ಅವಿತುಬಿಡುತ್ತವೆ. ಆ ಕಂಪನಿಯಲ್ಲಿ ಹಿಂಸೆಯಾದ್ರೆ ಬೇರೆ ಕಂಪನಿಗೆ ರೆಸ್ಯೂಮ್ ಕಳಿಸಿ. ನೀವ್ಯಾಕೆ ಡಿಪ್ರೆಷನ್‌ಗೆ ಒಳಗಾಗ್ತೀರಾ? ಯು ಆರ್ ಎ ಜೀನಿಯಸ್', ಭಾಗ್ಯಳೀಗ ಸಾಂತ್ವನ ಹೇಳುತ್ತಾಳೆ.

'ಏಯ್ ಅದು ನಂದೇ ಕಂಪನಿ ಕಣೆ. ನಾನಿಲ್ದೆ ಅದ್ಹೇಗೆ ನಡೆಸ್ತಾರೋ, ಐ ವಿಲ್ ಸೀ' ಎಂದವನು ಕೂಗಾಡುವಾಗ ನೊಂದುಕೊಳ್ಳುತ್ತಾಳೆ. ಒಂದು ದಿನ ಇದ್ದಕ್ಕಿದ್ದಂತೆ ಬಾಸ್ ಅವನ ಫ್ಲಾಟ್‌ಗೇ ಬರುತ್ತಾನೆ. ಇವನು ಹೆಂಡತಿ ಮಕ್ಕಳೊಂದಿಗೆ ಸಿನಿಮಾಕ್ಕೆ ಹೊರಟಿರುತ್ತಾನೆ. ಆದರೂ ನಗುತ್ತಲೇ ಬರಮಾಡಿಕೊಳ್ಳುತ್ತಾನೆ. ಏನ್ ಸರ್ಪ್ರೈಸ್ ವಿಸಿಟ್ಟಾ?' ವ್ಯಂಗವಾಗಿ ಪ್ರಶ್ನಿಸಿದ. 'ನೊ, ನೊ, ಸಿಕ್ ಲೀವ್ ಹಾಕಿದ್ರಲ್ಲ, ಹೇಗಿದ್ದೀರೋ ಅಂತ ಬಂದೆ. ಹಣದ ಅವಶ್ಯಕತೆ ಏನಾದ್ರೂ ಇದ್ದರೆ ಹೇಳಿ ಗಿರೀಶ್', ಬಾಸ್ ಸಣ್ಣಗೆ ನಕ್ಕ. 'ನೋ ಥ್ಯಾಂಕ್ಸ್' ಅಂದ ಗಿರೀಶ. 'ಓಕೆ, ಎಲ್ಲೋ ಹೊರಟಿದ್ದೀರಿ, ಫ್ಯಾಮಿಲಿ ಸಮೇತ ಒರ್ತಿನೀ ಕಣ್ರಿ' ಎಂದು ಬಾಸ್, ಭಾಗ್ಯ ತಂದು ಕೊಟ್ಟ ಜ್ಯೂಸ್ ಕುಡಿದು ಹೊರಟು ಹೋದ. ಬಾಸ್ ಹೋದ ಮೇಲೆ ಇವಳ ಎನ್‌ಕ್ವಯರಿ ಶುರು. 'ಏನ್ ನಡೆಸಿದಿರಾ ನೀವು? ಕಂಪನಿಗೆ ಹೋಗೊಲ್ವಾ?' ಕಳವಳ ಅವಳದ್ದು. ಮೌನವೇ ಉತ್ತರ ಇವನದ್ದು.

***

ಸ್ವಿಟ್ಜರ್‌ಲ್ಯಾಂಡ್‌ಗೆ ಕಂಪನಿಯಿಂದ ಪರಮ್ ಶೆಟ್ಟಿ, ಶಾಲಿನಿ ಹೋದರೆಂಬ ಬಗ್ಗೆ ಆಪ್ತ ಸೇವಕನಿಂದ ಇವನಿಗೆ ಮಾಹಿತಿ ದೊರಕಿದಾಗ ಪುಕ್ಕ ಸುಟ್ಟ ಕೋಳಿಯಂತಾದ ಕಂಪನಿ ಕಡೆಯಿಂದ ಯಾವ ಆ್ಯಕ್ಷನ್ನೂ ಇಲ್ಲ, ರಿಯಾಕ್ಷನ್ನೂ ಇಲ್ಲ! ನಿರುದ್ಯೋಗಿಯಂತಾದ ಇವನು ಮನೆಗೆ ಹೊಂದಿಕೊಳ್ಳಲು ಹೆಣಗಿ ಹೈರಾಣಾದ. ಹೆಂಡತಿ ಮಕ್ಕಳನ್ನು ದಿನವೂ ಆಫೀಸಿಗೆ, ಶಾಲೆಗೆ ಬಿಡೋದು, ಕರೆ ತರೋದು ಮಾಡುತ್ತಾ ಟೈಂಪಾಸ್ ಮಾಡಿದ. ನಂತರ ಒಬ್ಬನೇ ಕೇರಂ ಆಡಿದ. ಸಂಜೆ ಹೆಂಡತಿ ಮಕ್ಕಳೊಡನೆ ಮಾಲ್‌ಗಳತ್ತ ಅಲೆದ. ಅಲೆದರೂ ಉಲ್ಲಾಸ ಕೈಕೊಟ್ಟಿತು. ಮೊದಲಿನಂತೆ ಪರ್ಸ್ ಉದಾರಿಯಾಗಲಿಲ್ಲ. ಕೂತು ಉಂಡ್ರೆ ಕುಡಿಕೆ ಹೊನ್ನೂ ಸಾಲದೆಂಬ ಸತ್ಯಗೋಚರ. ಭಾಗ್ಯ ಇದನ್ನೆಲ್ಲ ಗಮನಿಸಿ ಕಂಗಾಲು.

'ರಜಾ ಮುಗಿಲಿಲ್ವೇನ್ರಿ? ಯಾವಾಗ ಜಾಬ್‌ಗೆ ಅಟೆಂಡ್ ಮಾಡೋದು?' ಆಕ್ಷೇಪವೆತ್ತಿದಳು. ತಿಂಗಳಾ ಐದು ಲಕ್ಷ ಪಗಾರ ತರುವ ತಾನು ಎರಡು ತಿಂಗಳು ಕೂತಿದ್ದನ್ನು ಇವಳು ಸಹಿಸದೆ ಹೋದಳಲ್ಲ ಎಂದ ಬೆಪ್ಪಾದ. ತನ್ನ ಒಳಗುದಿ ಹೇಳಿಕೊಳ್ಳಲು ಸರಿಯಾದ ಗೆಳೆಯರೂ ಇಲ್ಲವೆನಿಸಿತು. ಎಲ್ಲರಿಗೂ ನನ್ನ ಕಂಡರೇನೆ ಅಸೂಯೆ ಎಂದು ರೇಗಿದ. ಒಂದು ದಿನ ಕೊರಿಯರ್ ಬರುತ್ತದೆ. ದಪ್ಪನೆಯ ಕವರ್! ಒಡೆದು ನೋಡಿದರೆ ಪಿಂಕ್ ಲೆಟರ್ ಮುಂದಿನ ಕಥೆ ಸಾರುತ್ತದೆ. ಕಾರು ಒಪ್ಪಿಸಲು. ತಿಂಗಳೊಪ್ಪತ್ತಿನಲ್ಲೇ ಫ್ಲಾಟ್ ಖಾಲಿ ಮಾಡಲು ತಾಕೀತು ಮಾಡಲಾಗಿದೆ. ತನಗೇನೂ ಆಗಿಲ್ಲವೆಂಬತೆ ಅವನಿದ್ದರೂ ಭಾಗ್ಯಳ ಕಣ್ಣೀರು ಅವನನ್ನು ಒಳಗೇ ಹಣ್ಣು ಮಾಡುತ್ತದೆ.

'ಡೋಂಟ್ ಬಾದರ್ ಡಿಯರ್, ಇದಲ್ಲದಿದ್ದರೆ ಇನ್ನೊಂದು ಕಂಪನಿ. ಆ ಕಂಪನಿಗಾಗಿ ನನ್ನ ಜೀವವನ್ನೇ ತೇದಿದ್ದು ನನ್ನ ಮುಠ್ಠಾಳತನ' ಎನ್ನುತ್ತಾನೆ. ದೊಡ್ಡದಾದ ನಿಟ್ಟುಸಿರೊಂದು ಅವನಿಗೆ ಗೊತ್ತಿಲ್ಲದಂತೆ ಈಚೆ ಬರುತ್ತದೆ. ಬೇರೆ ಕಂಪನಿಗಳ ಬಾಗಿಲಲ್ಲಿ ಹೋಗಿ ನಿಲ್ಲುವುದು ಈ ವಯಸ್ಸಿನಲ್ಲಿ ತಾನಂದುಕೊಂಡಷ್ಟು ಸುಲಭವಲ್ಲವೆನಿಸುತ್ತದೆ. ಡ್ರೈವರ್ ಬಂದು ಕಾರು ಒಯ್ಯುತ್ತಾನೆ. ಭಾಗ್ಯ ಬೇರೆ ಮನೆ ನೋಡುತ್ತಾಳೆ. ಸಿಂಗಲ್ ಬೆಡ್ ರೂಂ ಮನೆಯನ್ನು ಆಯ್ಕೆ ಮಾಡುತ್ತಾಳೆ. ಅದು ತಾನಿದ್ದ ಫ್ಲಾಟ್‌ನ ಹಾಲ್‌ನಷ್ಟು ಇಲ್ಲವೆಂಬ